ದಿಃ **24-02-2026** ರ ಮಧ್ಯಂತರ ಅರ್ಜಿಯ ನಂ**. 17 & 18** ರ ಆದೇಶದ ಮೇರೆಗೆ ದಿನಾಂಕ **: 28.02.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ**. SSP** ವಕೀಲರಿಂದ**:**

ನಾನು 2008 ರಿಂದ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಪಹಣಿ ಪತ್ರಿಕೆ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ನನ್ನ ತಂದೆ ಜೀವಂತ ಇದ್ದಾಗ ನನ್ನ ತಂದೆ ಹೆಸರಿನಲ್ಲಿ ಹೊಲ ಇರುವುದು ಗೊತ್ತಾಗಿರುತ್ತದೆ. ನನ್ನ ತಂದೆ 2002 ರಲ್ಲಿ ತೀರಿಕೊಂಡಿರುತ್ತಾರೆ. ಪ್ರತಿವಾದಿ ಹೆಸರಿನಲ್ಲಿ ದಾವಾ ಆಸ್ತಿ ಇರುವುದು ನನ್ನ ತಂದೆ ಜೀವಿತಕಾಲದಲ್ಲಿ ಗೊತ್ತಾಗಿರುತ್ತದೆ. ನನ್ನ ತಂದೆ ಅವರ ಬಳಿ ಹೋಗಿ ಬಂದಿರುತ್ತಾರೆ. ನನ್ನ ತಂದೆ ತೀರಿಹೋದ ನಂತರ ನಾನು ಈ ದಾವೆ ಹೂಡಿರುತ್ತೇನೆ. ನನಗೆ ಪ್ರತಿವಾದಿ ಹೆಸರಿನಲ್ಲಿ ಪಹಣಿ ಇರುವುದು ಗೊತ್ತಾದಾಗ ವಯಸ್ಸು 20 ಇರಬಹುದು. ಸದರಿ ಪ್ರತಿವಾದಿ ಹೆಸರು ಪಹಣಿ ಪತ್ರಿಕೆಯಲ್ಲಿ ಇರುವುದು ಪ್ರಶ್ನಿಸಿ ನನ್ನ ತಂದೆ ಕಂದಾಯ ಇಲಾಖೆಯಲ್ಲಿ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ತಕರಾರು ಅರ್ಜಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ 1975 ರಲ್ಲಿ ಪ್ರತಿವಾದಿಯ ಗಂಡ ಶ್ರೀಮಂತ ರಾವ ರವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಖರೀದಿ ಆದ ನಂತರ ಶ್ರೀಮಂತ ಆತನ ನಂತರ ಪ್ರತಿವಾದಿಗಳು ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ವೈಯಕ್ತಿಕವಾಗಿ ತಹಶೀಲ್ದಾರ ಕಚೇರಿಗೆ ತಕರಾರು ಅರ್ಜಿ ನೀಡಿಲ್ಲ, ಆದರೆ ನನ್ನ ತಂದೆ ನೀಡಿರುತ್ತಾರೆ. ನಾನು ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟಿಸು ನೀಡಿರುತ್ತೇನೆ. ಮೊನ್ನೆ ನೋಟಿಸು ನೀಡಿರುತ್ತೇವೆ. ದಾವಾ ಆಸ್ತಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ